**Code No. 18 Z**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಶೀಘ್ರಲಿಪಿ – ಪ್ರೌಢ ದರ್ಜೆ – ತೃತೀಯ ಪತ್ರಿಕೆ

# (ಸೂತ್ರಗಳು ಮತ್ತು ಸಂಕ್ಷೇಪಿಸುವಿಕೆ)

ಜನವರಿ / ಫೆಬ್ರವರಿ, 2020

ಸಮಯ : 2½ ಗಂಟೆಗಳು

ಅಂಕಗಳು : 100

***ಸೂಚನೆ :*** ಉತ್ತರಗಳು ಸಂಕ್ಷಿಪ್ತ ಹಾಗೂ ಸಮಂಜಸವಾಗಿರಬೇಕು.

I. **ಈ ಕೆಳಗಿನವುಗಳಲ್ಲಿ ಯಾವುದಾದರೂ *ಒಂದಕ್ಕೆ* ಮಾತ್ರ ಉತ್ತರಿಸಿ :** 1 × 15 = 15

(ಅ) ಶೀಘ್ರಲಿಪಿಯಲ್ಲಿ ಆದಿಯಲ್ಲಿ "ಸಣ್ಣ ಕೊಕ್ಕೆ"ಗಳನ್ನು ಉಪಯೋಗಿಸಲು ಅನುಸರಿಸುವ ಸೂತ್ರಗಳನ್ನು ಉದಾಹರಣೆಗಳ ಸಹಿತ ವಿವರಿಸಿ.

***ಅಥವಾ***

(ಆ) ಶೀಘ್ರಲಿಪಿಯಲ್ಲಿ "ಸ್ತ, ಷ್ಟ ಸಣ್ಣ ಕುಣಿಕೆ"ಗಳನ್ನು ಉಪಯೋಗಿಸುವ ಸೂತ್ರಗಳ ಬಗ್ಗೆ ಉದಾಹರಣೆ ಸಹಿತ ವಿವರಿಸಿ.

II. **ಈ ಕೆಳಗಿನವುಗಳಲ್ಲಿ ಯಾವುದಾದರೂ *ಮೂರಕ್ಕೆ* ಟಿಪ್ಪಣಿ ಬರೆಯಿರಿ :** 3 × 5 = 15

(ಅ) ಸಣ್ಣ ವೃತ್ತಗಳು

(ಆ) ಆದಿ ಮತ್ತು ಅಂತ್ಯದಲ್ಲಿ ಅರ್ಧ ವೃತ್ತಗಳು

(ಇ) ಅಧೋಮುಖ "ಹ"

(ಈ) "ಯ–ವ–ಜ್ಞ" ಸಂಯುಕ್ತ ವ್ಯಂಜನಗಳು

(ಉ) ಇಮ್ಮಡಿ ರೇಖಾಕ್ಷರಗಳ ಸಾನ

III. **ಈ ಕೆಳಗೆ ನೀಡಿರುವ ಯಾವುದಾದರೂ ಐದು ಪದಗಳಿಗೆ ಶೀಘ್ರಲಿಪಿ ಸೂತ್ರಗಳೊಂದಿಗೆ ಸಂಕ್ಷಿಪ್ತ ಅಕ್ಷರಗಳನ್ನು ಬರೆಯಿರಿ :** 5 × 2 = 10

(ಅ) ಶಂಕರ

(ಆ) ನೋಡುತ್ತಿದ್ದುದರಲ್ಲಿ

(ಇ) ಸೌಂದರ್ಯ

(ಈ) ಪತ್ನಿ

(ಉ) ಬಂಢತನ

(ಊ) ಸಫಲ

(ಋ) ಶಾಂತಿಸಾಗರ

IV. **ಈ ಕೆಳಗಿನ ನೀಡಿರುವ ಪದಗಳಿಗಿ ಸಂಕ್ಷಿಪ ರೂಪಗಳನ್ನು ಬರೆಯಿರಿ :** 5 × 1 = 5

(ಅ) ಆದರ್ಶಪ್ರಾಯ

(ಆ) ಕೇಂದ್ರೀಕರಿಸು

(ಇ) ತಾಂಡವವಾಡು

(ಈ) ಜಾತ್ಯಾತೀತ

(ಉ) ವಿದ್ಯುಚ್ಛಕ್ತಿ

V. **ಈ ಕೆಳಗಿನ ನೀಡಿರುವ ಪದಗಳಿಗೆ ಪದಸಮೂಹಗಳನ್ನು ಬರೆಯಿರಿ :** 5 × 1 = 5

(ಅ) ಅಂತರಾಷ್ಟ್ರೀಯ ಪರಿಸ್ಥಿತಿ

(ಆ) ಅಕ್ಕ ತಂಗಿಯರೆ

(ಇ) ಉದ್ಘಾಟನಾ ಭಾಷಣ

(ಈ) ಎಕ್ಸೈಸ್ ಕಮೀಷನರ್

(ಉ) ಒಳಚರಂಡಿ ವ್ಯವಸ್ಥೆ

VI. **ಈ ಕೆಳಗೆ ಕೊಟ್ಟಿರುವ ವಿಷಯವನ್ನು ಪರೋಕ್ಷ ವಿಧಾನದಲ್ಲಿ 500 ಅಕ್ಷರಗಳಿಗೆ ಮೀರದಂತೆ ಸಂಕ್ಷೇಪಿಸಿ ಬರೆಯಿರಿ :** 50

ದಿನಾಂಕ ಆಗಸ್ಟ್ ಎಂಟು ಎರಡು ಸಾವಿರದ ಹತ್ತೊಂಬತ್ತರಂದು ವಿಧಾನಸಭೆಯ ಸದಸ್ಯರೊಬ್ಬರು ದೇಶದ ವ್ಯವಸಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸುವ ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸುವ ಐತಿಹಾಸಿಕ ನಿರ್ಣಯವನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ

ಸರ್ಕಾರ ಕೈಗೊಳ್ಳುವ ಮೂಲಕ ಭಾರತದ ಕಿರೀಟ ಪ್ರಾಯವಾಗಿರುವ ಕಾಶ್ಮೀರಕ್ಕೆ ಎರಡನೇ ಸ್ವಾತಂತ್ರ್ಯವನ್ನು ತಂದುಕೊಟ್ಟಿದೆ. ಕಣಿವೆ ರಾಜ್ಯಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸುವ 370ನೇ ವಿಧಿ ಮತ್ತು 35(ಎ) ಪರಿಚ್ಛೇದ ಸುಮಾರು 70 ವರ್ಷಗಳಿಂದ ಜಾರಿಯಲ್ಲಿದ್ದರೂ ಜಮ್ಮು–ಕಾಶ್ಮೀರ ರಾಜ್ಯ ಅಭಿವೃದ್ಧಿ ವಿಷಯದಲ್ಲಿ ಇತರೆ ರಾಜ್ಯಗಳಿಗಿಂತ ಹಿಂದೆ ಇತ್ತು. ಇದೀಗ 370ನೇ ವಿಧಿಯನ್ನು ರದ್ದು ಮಾಡಿರುವುದರಿಂದ ದೇಶದ ಇತರ ರಾಜ್ಯಗಳಂತೆ ಕಾಶ್ಮೀರವೂ ಕೈಗಾರಿಕೆ ಮತ್ತಿತರ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದುವ ನಿರೀಕ್ಷೆ ಹೊಂದಲಾಗಿದೆ. ಉದ್ಯೋಗವಿಲ್ಲದೆ ಭದ್ರತಾ ಪಡೆಗಳತ್ತ ಕಲ್ಲು ಹೊಡೆಯುತ್ತಿರುವ ಯುವ ಜನತೆ ಇನ್ನು ಮುಂದೆ ಗೌರವಯುತವಾಗಿ ಬದುಕಲು ಅವಕಾಶಗಳು ಸೃಷ್ಟಿಯಾಗಲಿವೆ ಎಂಬ ಆಶಾಭಾವ ಉಂಟಾಗಿದೆ.

ಕಾಶ್ಮೀರಕ್ಕೆ ಇದುವರೆವಿಗೂ ಇದ್ದ ವಿಶೇಷ ಸ್ಥಾನಮಾನವನ್ನು ಕಳೆದುಕೊಂಡಿರುವುದರಿಂದ ದೇಶದ ಎಲ್ಲಾ ಕಾನೂನುಗಳು ಅಲ್ಲಿಗೂ ಅನ್ವಯವಾಗಲಿವೆ. ವಿಧಾನಸಭೆ ಹಾಗೂ ಲೋಕಸಭೆ ಕ್ಷೇತ್ರಗಳಲ್ಲಿ ಮೀಸಲಾತಿ ನಿಗದಿಗೊಳಿಸಬೇಕಾಗುತ್ತದೆ. ಕಾಶ್ಮೀರದಲೂ ಎಸ್ಸಿ, ಎಸ್ಟಿ ಮೀಸಲು ಕ್ಷೇತ್ರಗಳನ್ನು ಘೋಷಿಸಲಾಗುತ್ತದೆ. ಸರ್ಕಾರ ಮುಂದಿನ ದಿನಗಳಲ್ಲಿ ಜಮ್ಮು ಕಾಶ್ಮೀರದ ಕ್ಷೇತ್ರ ಪುನರ್‌ವಿಂಗಡಣೆ ಮಾಡಿ ಕಾಶ್ಮೀರಕ್ಕಿಂತ ಹೆಚ್ಚಿನ ವಿಧಾನಸಭಾ ಕ್ಷೇತ್ರಗಳು ಜಮ್ಮುವಿನಲ್ಲೇ ಇರುವಂತೆ ನೋಡಿಕೊಂಡರೆ ಕಣಿವೆ ರಾಜ್ಯ ಮೊದಲ ಕಾಶ್ಮೀರೇತರ ಮುಖ್ಯಮಂತ್ರಿಯನ್ನು ಕಾಣುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ.

ಜಮ್ಮು, ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶವೆಂದು ಘೋಷಣೆ ಮಾಡಿರುವುದರಿಂದ ದೇಶದಲ್ಲಿ ಸದ್ಯ ಇರುವ ರಾಜ್ಯಗಳ ಸಂಖ್ಯೆ ಇಪ್ಪತ್ತೊಂಬತ್ತರಿಂದ ಇಪ್ಪತ್ತೆಂಟಕ್ಕೆ ಇಳಿಕೆಯಾಗಲಿದೆ. ಹಾಲಿ ಏಳು ಕೇಂದ್ರಾಡಾಳಿತ ಪ್ರದೇಶಗಳಿದ್ದು, ಅವುಗಳ ಸಂಖ್ಯೆ ಒಂಬತ್ತಕ್ಕೆ ಏರಲಿದೆ. ಈ ಪೈಕಿ ವಿಧಾನಸಭೆ ಹೊಂದಿದ ಕೇಂದ್ರಾಡಳಿತ ಪ್ರದೇಶಗಳೆಂದರೆ ದೆಹಲಿ ಹಾಗೂ ಪುದುಚೇರಿ ಮಾತ್ರ. ಆ ಸಾಲಿಗೆ ಕಾಶ್ಮೀರ ಕೂಡ ಸೇರ್ಪಡೆಯಾಗಲಿದೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹ, ಚಂಡೀಗಢ, ದಾದ್ರಾ ನಗರಹವೇಲಿ, ದಮನ್ ಮತ್ತು ದಿಯು ಹಾಗೂ ಲಕ್ಷದ್ವೀಪ ಕೂಡ ಕೇಂದ್ರಾಡಳಿತ ಪ್ರದೇಶಗಳೇ, ಅಲ್ಲಿ ವಿಧಾಸಭೆ ಇಲ್ಲ.

ಕೇಂದ್ರ ಸರ್ಕಾರ ರೂಪಿಸುವ ಯಾವುದೇ ಕಾನೂನುಗಳು ಜಮ್ಮು, ಕಾಶ್ಮೀರದ ಒಪ್ಪಿಗೆ ಇಲ್ಲದೆ ಈ ರಾಜ್ಯದಲ್ಲಿ ಜಾರಿಯಾಗುತ್ತಿರಲಿಲ್ಲ. ದೇಶಕ್ಕೆಲ್ಲಾ ಒಂದು ಕಾನೂನು ಇದ್ದರೆ ಕಾಶ್ಮೀರಕ್ಕೆ

ಬೇರೆ ಕಾನೂನುಗಳು ಇದ್ದವು. ಆರ್.ಟಿ.ಇ. ಕಾಯ್ದೆ ಇಲ್ಲಿರಲಿಲ್ಲ. ಶಾಶ್ವತವಾಗಿ ಇಲ್ಲಿ ನೆಲೆಸಿರುವವರಿಗೆ ಮಾತ್ರ ಈ ರಾಜ್ಯದಲ್ಲಿ ಆಸ್ತಿ ಖರೀದಿ ಮಾಡಲು ಅವಕಾಶ ಇತ್ತು. ಹೊರಗಿನ ಜನರು ಇಲ್ಲಿ ಆಸ್ತಿ ಖರೀದಿಸುವಂತಿರಲಿಲ್ಲ. ಹೀಗಾಗಿ ಜಮ್ಮು–ಕಾಶ್ಮೀರದತ್ತ ಬಾರೀ ಉದ್ಯಮಿಗಳು ತಲೆಹಾಕಲಿಲ್ಲ. ಕೈಗಾರಿಕೆಗಳು ಬರಲಿಲ್ಲ. ಉದ್ಯೋಗ ಸೃಷ್ಟಿಯಾಗಲಿಲ್ಲ ಸ್ಥಳೀಯವಾಗಿ ಸೃಷ್ಟಿಯಾಗಿದ್ದ ಉದ್ಯೋಗಗಳು ಇಡೀ ರಾಜ್ಯದ ನಿರುದ್ಯೋಗಿಗಳ ಹೊಟ್ಟೆ ತುಂಬಿಸಲಿಲ್ಲ, ಪರಿಣಾಮ ಉಗ್ರ ಸಂಘಟನೆಗಳತ್ತ ಮುಖ ಮಾಡಿದ ಯುವಕರು ಹಣ ಪಡೆದು ಸೇನೆಯತ್ತ ಕಲ್ಲು ಹೊಡೆದರು, ಉಗ್ರರ ಮಾತಿಗೆ ಮರುಳಾಗಿ ಜಿಹಾದಿಗಳಾದರು, ಸೇನೆ ಗುಂಡಿಗೆ ಬಲಿಯಾದರು. ಇದೀಗ 370ನೇ ವಿಧಿಯ ಅಂಶಗಳು ಸಮಾಧಿ ಸೇರಿರುವುದರಿಂದ ಜಮ್ಮು, ಕಾಶ್ಮೀರದಲ್ಲಿ ಹೊಸ ಶಕೆ ಆರಂಭವಾಗುವ ಲಕ್ಷಣಗಳಿವೆ.

ಕರ್ನಾಟಕದಲ್ಲಿ “ಆಶ್ಲೇಷ ಮಳೆ” ಈ ಬಾರಿ ಜೋರಾಗಿಯೇ ಸುರಿದಿದೆ. ಎಲ್ಲೆಲ್ಲೂ ನೀರೇ ನೀರು ಎನ್ನುವಂತೆ ಜಲಪ್ರಳಯ ಸೃಷ್ಟಿಸಿದೆ. ರಸ್ತೆ, ಸೇತುವೆಗಳು ಮುಳುಗಿ ಸಂಪರ್ಕ ಕಡಿತವಾಗಿರುವುದು ಒಂದೆಡೆಯಾದರೆ, ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ನದಿಗಳು ಉಕ್ಕೇರಿ ಹರಿದು ಅಪಾಯಕಾರಿ ಪ್ರವಾಹ ಪರಿಸ್ಥಿತಿ ಉಂಟು ಮಾಡಿದ್ದರಿಂದ ಸರ್ಕಾರಿ ಆಡಳಿತ ಯಂತ್ರ ತಕ್ಷಣ ಸಮರೋಪಾದಿಯಲ್ಲಿ ಪ್ರವಾಹ ಸಂತ್ರಸ್ತರ ನೆರವಿಗೆ ಧಾವಿಸಬೇಕಿದೆ.

ಮುಖ್ಯಮಂತ್ರಿಗಳು ವೈಮಾನಿಕ ಸಮೀಕ್ಷೆ ನಡೆಸಿ ಪ್ರವಾಹ ಪರಿಸ್ಥಿತಿ ಅವಲೋಕಿಸಿದ್ದಾರೆ. ಅಧಿಕಾರಿಗಳ ಸಭೆ ನಡೆಸಿ ಪರಿಸ್ಥಿತಿ ನಿಭಾಯಿಸಲು ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ. ಆಯಾ ಜಿಲ್ಲಾಧಿಕಾರಿಗಳಿಗೆ ಅಗತ್ಯ ಅನುದಾನವನ್ನು ಇಟ್ಟು ಆಡಳಿತ ಯಂತ್ರವನ್ನು ಚುರುಕುಗೊಳಿಸಿದ್ದಾರಿ. ಹಾಗಾಗಿ ಪರಿಸ್ಥಿತಿಗೆ ಅನುಗುಣವಾಗಿ ಶಾಲಾ–ಕಾಲೇಜುಗಳಿಗೆ ರಜೆ, ರಕ್ಷಣಾ ಕಾರ್ಯಚರಣೆ, ಸಂತ್ರಸ್ತರ ಸ್ಥಳಾಂತರ, ಗಂಜೀ ಕೇಂದ್ರಗಳ ಆರಂಭ ಇತ್ಯಾದಿಗಳು ನಡೆದಿವೆ. ಆದರೆ ಇಂತಹ ದುರ್ಬರ ಪರಿಸ್ಥಿತಿಯಲ್ಲಿ ಯಾವ ಪ್ರಮಾಣದಲ್ಲಿ ನೆರವು ಇರಬೇಕಿತ್ತೋ ಅಷ್ಟು ಇಲ್ಲ ಎನ್ನುವ ಮಾತುಗಳೂ ಅಲ್ಲಲ್ಲಿ ಕೇಳಿಬರುತ್ತಿವೆ. ಮತ್ತು ಯಾರಿಗೆ ನಮ್ಮ ಗೋಳು ಹೇಳಿಕೊಳ್ಳಬೇಕು ಎನ್ನುವುದು ಸಂತ್ರಸ್ತರಿಗೆ ತಿಳಿಯದಂತಾಗಿದೆ.